# ಇಂದು ನಿನ್ನ ಮೊರೆಯಹೊಕ್ಕೆ ವೆಂಕಟೇಶನೇ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 59.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. Note: Singer has followed these lyrics.

ರಾಗ: ಖರಹರ ಪ್ರಿಯ ತಾಳ: ಮಟ್ಟೆ

ಇಂದು ನಿನ್ನ ಮೊರೆಯಹೊಕ್ಕೆ ವೆಂಕಟೇಶನೇ
ಎಂದಿಗಾದರೆನ್ನ ಕಾಯೋ ಶ್ರೀನಿವಾಸನೇ ॥ ಪ ॥

ಶೇಷಗಿರಿಯ ವಾಸ ಶ್ರೀಶ ದೋಷ ರಹಿತನೇ
ಏಸು ದಿನಕೂ ನಿನ್ನ ಪಾದ ದಾಸನು ನಾನೇ
ಕ್ಲೇಶಗೈಸದಿರು ಎನ್ನ ಸ್ವಾಮಿಯು ನೀನೇ ॥ ೧ ॥

ಕಮಲನಯನ ಕಾಮಜನಕ ಕರುಣವಾರಿಧೇ
ರಮೆಯನಾಳ್ವ ಕಮಲನಾಭ ಹೇ ದಯಾನಿಧೇ
ಯಮನ ಪುರದೀ ಶಿಕ್ಷಿಸದಿರು ಪಾರ್ಥಸಾರಥೇ ॥ ೨ ॥

ಉರಗ ಶಯನ ಸುರರಿಗೊಡೆಯ ಸಿರಿಯ ರಮಣನೇ
ಶರಣಪಾಲ ಬಿರುದು ತೋರಿ ಪೊರೆವ ದೇವನೇ
ಕರುಣಿಸೆಮಗೆ ಮುಕುತಿಯನು ಪುರಂದರ ವಿಠಲನೇ ॥ ೩ ॥

**Classification:** Keerthane
**Ankita:** purandara vittala

**Location:** NA

**Category:** Srinivasa Stuti

**Sub-Category:** srinivasa, parvata, Tirupati, padma, Narayana, Vishnu, daya, yama, arjuna, pandava, uraga, sura, Lakshmi, deva, karuna, mukti,

**Pravachana:** NA

**Explanation:** NA